ಮನುಷ್ಯ ಭಾವನೆ ಅಂತ ಯೋಚಿಸಿದಾಗ ಅವರು ತುಸು ಭಿನ್ನವಾಗಿ ವರ್ತಿಸುತ್ತಿದ್ದುದುಂಟು. ಕೆಲವೊಮ್ಮೆ ಗಾಡಿಗೆ ವಿಪರೀತ ಕಡಲೆ ಬಳ್ಳಿಯನ್ನೋ ಗೊಬ್ಬರವನ್ನೋ ತುಂಬಿ, ಎತ್ತುಗಳು ಹಳ್ಳವನ್ನು ದಾಟಲಾಗದೇ ಏದುತ್ತಿರುವಾಗ ಅವುಗಳಿಗೆ 'ದನಕ್ಕೆ ಬಡಿದಂಗೆ' ಬಡಿದು, 'ಸಾಯಿಸಿ ಬಿಡ್ತೀಯಲ್ಲೋ ಮೂಕ ಪ್ರಾಣಿಗಳನ್ನ' ಎಂದು ತಾತನಿಂದ ಬೈಸಿಕೊಳ್ಳುತ್ತಿದ್ದರು. ಆಗೆಲ್ಲ ನಾನು ಗಾಡಿಯ ಲಗೇಜಿನ ಮೇಲೆ ಕೂತಿರುತ್ತಿದ್ದೆ, ಸವಾರಿಯ ಮಜಾ ಪಡೆಯಲು! ಮಾಮ ಬಹುಶಃ ಹಿಂದೆ ತನಗೆ ಬಿದ್ದ ಒದೆಗಳನ್ನು ಯಥಾವತ್ತಾಗಿ ಎತ್ತುಗಳಿಗೆ ಸಾಗಹಾಕುತ್ತಿದ್ದರು ಅನಿಸುತ್ತದೆ. ಎತ್ತುಗಳನ್ನು ಗೊಂದಿಗೆಗೆ ಕಟ್ಟಿಹಾಕಿ ಮೇವು ಹಾಕುವಾಗ ಹಿಡಿತ ಮಾಡಿ ತಿರುಗ ಕೋಪಕ್ಕೆ ಗುರಿಯಾಗುತ್ತಿದ್ದರು. ಅವರು ಮನೆಯಲ್ಲಿ ಇನ್ನೊಂದು ಮೂಕ ಎತ್ತಿನಂತೆ ಇದ್ದರು ಎಂದರೆ ಅತಿಶಯೋಕ್ತಿಯೇನಲ್ಲ. ಮೂಕ ಅಂದರೆ ಮಾತಾಡುತ್ತಿರಲಿಲ್ಲ ಅಂತಲ್ಲ, ದಡಬಡನೆ ಹೊ ಹ್ಹೋ ಹೋ ಎಂದು ಜೋರುದನಿಯಲ್ಲಿ ತಾತನ ಮೇಲೆ ರೋಪು ಹಾಕುತ್ತಿದ್ದರು ಎನ್ನಿ, ಆಗೆಲ್ಲ ತಾತ ಅಕ್ಕನಿಗೆ ಅಂತಿದ್ದುಂಟು, ನೀನು ಬಂದು ಅವನಿಗೆ ಸಲಿಗೆ ಕೊಟ್ಟುಬಿಟ್ಟೆ ಎಂದು.

ಮಾಮನಿಗೆ ದುಡ್ಡನ್ನು ಎಣಿಸಲು ಬರುತ್ತಿರಲಿಲ್ಲ. ಅಕ್ಕ ಹೊರಗಿನ ಎಲ್ಲ ವ್ಯವಹಾರಗಳಿಗೂ ಹೋಗಲು ಆಗುತ್ತಿರಲಿಲ್ಲ. ಮಿಲ್ಲಿಗೆ ಸಂತೆಗೆ ಕಳಿಸುವಾಗ ರೂಪಾಯಿ ಬಿಲ್ಲೆಗಳನ್ನು ಮಾಮನಿಂದ ಮುಟ್ಟಿಸಿ ಸವರಿಸಿ ಉಂಟಾಗುವ ವಿಭಿನ್ನ ಅನುಭವಗಳ ಮೇಲೆ ಇದಕ್ಕೆ ಇಷ್ಟು ಬೆಲೆ, ಇಂಥ ವಸ್ತುವಿಗೆ ಇಷ್ಟು ಕಾಯಿನ್ನುಗಳನ್ನು ಕೊಡಬೇಕು ಎಂದು ತಿದಿಯೊತ್ತಿ ಕಳಿಸುತ್ತಿದ್ದರು. ಆಗೆಲ್ಲ ಮಾಮ ಬಹಳ ಎಚ್ಚರವಾಗಿರುತ್ತಿದ್ದರು. ಏನೇ ಹೇಳಿದರೂ ಬಹಳ ಭಯಭಕ್ತಿಯಿಂದ ಎಲ್ಲವನ್ನೂ ಆಲಿಸಿ ಶಿರಸಾವಹಿಸಿ ಪಾಲಿಸುತ್ತಿದ್ದರು. ತನಗೆ ತಿಳಿಯಲ್ಲವೆಂದು ಹೊರಗಿನವರು ಮೋಸ ಮಾಡುತ್ತಾರೆ ಎಂದು ಅವರಿಗೆ ವಿಪರೀತ ಭಯವಿತ್ತು. ಅಂತೆಯೇ ಹಾಲನ್ನು ಡೈರಿಗೆ ಹಾಕಲು ಕಳಿಸುವಾಗ ಅಳತೆಮಾಪನಗಳು ಯಾವುದು ಎಷ್ಟೆಷ್ಟು ಎಂಬ ಬಗ್ಗೆ ಸಾಧ್ಯವಾದಷ್ಟೂ ಶಿಕ್ಷಣ ಕೊಡಲಾಗುತ್ತಿತ್ತು. ಹಾಗಿದ್ದರೂ ವಾಪಸ್ಸು ಬಂದಾಗ ಕಡಿಮೆ ಲೀಟರು ಬರೆದು ಕಳಿಸಿದ್ದಾರೆಂದು, 'ನೀನು ಸರಿಯಾಗಿ ಗಮನಿಸಿಲ್ಲವಲ್ಲೋ' ಎಂದು ಉಗಿಸಿಕೊಳ್ಳುತ್ತಿದ್ದರು. ಅದು ಅವರಿಗೆ ಸ್ವಲ್ಪ ಕಷ್ಟದ ವಿದ್ಯೆಯಾಗಿತ್ತು. ಎಲ್ಲಾ ಗೊತ್ತಿರುವವರಿಗೇನೆ ಮೋಸ ಮಾಡುವ ಜಗತ್ತು ಇದು, ಇನ್ನು ಪಾಪ...

ತಾತನ ಮನೆ ಅತ್ಯಂತ ಶಿಸ್ತಿನ ಮನೆಯಾಗಿತ್ತು. ಅಲ್ಲಿ ವರ್ಷದಲ್ಲಿ ಬರುವ ಎಲ್ಲ ಹಬ್ಬಗಳ ಆಚರಣೆಯಾಗುತ್ತಿತ್ತು. ದೊಡ್ಡ ದೊಡ್ಡ ಹಬ್ಬಗಳಲ್ಲಿ ಹೆಣ್ಣುಮಕ್ಕಳೂ ಮೊಮ್ಮಕ್ಕಳೂ ಅಳಿಯಂದಿರೂ ಸೇರುತ್ತಿದ್ದರು. ವಾರ ವಾರ 'ಶನಿವಾರ' ಮಾಡುತ್ತಿದ್ದರು. ತಾತ ಊರಿನ ಮುಖ್ಯಭಾಗದಲ್ಲಿ ಅಶ್ವತ್ಥ ಕಟ್ಟೆ ಕಟ್ಟಿಸಿದ್ದರು. ಒಂದು ಆಲದ ಮರ, ಒಂದು ಬೇವಿನ ಮರ. ನಡುವೆ ದೇವರ ಗುಡಿ. ಶನಿವಾರ ಅಂದರೆ ನೆಲ ಒಲೆ ತೊಳೆಯುವುದು, ಸ್ನಾನ ಮಾಡುವುದು, 'ಕತೆ' ಓದುವುದು, ಅಶ್ವತ್ಥ ಕಟ್ಟೆಯ ಪೂಜೆ, ತೋಟದಲ್ಲಿನ ತಾವರೆ ಮರಕ್ಕೆ ಪೂಜೆ, ಗೋವಿಂದ ಕೂಗುವುದು, ಊರಿನೋರಿಗೆಲ್ಲ ಪ್ರಸಾದ ಹಂಚುವುದು ಇತ್ಯಾದಿ. ಮಾಮ ಈ ಎಲ್ಲ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರೇ ಮುನ್ನಲೆಯಲ್ಲಿರುತ್ತಿದ್ದರು. ಅವರು ಪೂಜೆ ಮಾಡುವಾಗ ಅವರಲ್ಲಿನ ಭಾವ ಎಂಥದು ಎಂದು ನನಗೆ ಆಗಲೂ ಸೋಜಿಗ, ಈಗಲೂ ಸೋಜಿಗ. ಅಂದರೆ ಅವರ ಭಕ್ತಿಯೆಂಥದು ಎಂದು. ತಾತ ಬೈಯುತ್ತಿದ್ದರು, ಸುಮ್ಮನೆ ಎಮ್ಮೆ ಮೇಲೆ ಮಳೆ ಸುರಿದಂಗೆ ಮಾಡ್ತಾನೆ ಅಂತ. ಅಂದರೆ ಅದೆಲ್ಲ ಯಾಂತ್ರಿಕವಾಗಿತ್ತೋ ಮಾಮನಿಗೆ? ತುಟಿಗಳು ಮಣ ಮಣ ಅಂತಿದ್ದವಲ್ಲ ಅದೇನದು? ರಾಮ ಯಾರು, ಕೃಷ್ಣ ಯಾರು, ಅಸಲಿಗೆ ದೇವರೆಂದರೇನು ಎಂಬುದೂ ಅವರಿಗೆ ಗೊತ್ತಿರಲಿಲ್ಲವೆಂದು ನನ್ನ ಅನಿಸಿಕೆ. ಅಜ್ಜಿ–ತಾತನ ಅಷ್ಟೊಂದು ಪೂಜೆ ಪುನಸ್ಕಾರಕ್ಕೆ ಯಾವ ದೇವರೂ ಕಿವಿ ಕೊಡಲಿಲ್ಲವೆಂಬುದು ನೋವಿನ ಸಂಗತಿ.

ಮಾಮನ ದೈವ ಪರಿಕಲ್ಪನೆ ಹೇಗೆ ಶೂನ್ಯವಾಗಿತ್ತೋ ಅಂತೆಯೇ ದೆವ್ವ ಪರಿಕಲ್ಪನೆಯೂ ಶೂನ್ಯವಾಗಿತ್ತು. ದೇವರಿದ್ದರೆ ಅಲ್ಲವೇ ದೆವ್ವವು. ನಡುರಾತ್ರಿ ಕತ್ತಲೆಯಲ್ಲಿ ತೋಟಕ್ಕೆ ನೀರು ಹಾಯಿಸುತ್ತಿದ್ದರು. ಎಲ್ಲಿಯಾದರೂ ಸರ ಸರ ಎಂದು ಸದ್ದು ಬಂದರೆ ಹೆದರುತ್ತಿರಲಿಲ್ಲ, ಬದಲಾಗಿ ಮಗ್ಗುಲಲ್ಲಿದ್ದ ಕವಣೆಗೆ ಕಲ್ಲು ಸೇರಿಸಿ ಬೀಸುತ್ತಿದ್ದರು. ಒಮ್ಮೆ ಒಂದು ಕರಡಿಯ ಅಂಡಿಗೆ ಬಿದ್ದು ಅದು ತಪ್ಪಿಸಿಕೊಂಡು ಓಡಿಹೋಗಿತ್ತು. ಬಿದ್ದು ಉಂಟು ಮಾಡಿದ ಗುಳಿಯಿಂದ ಉದುರಿದ ಕೂದಲುಗಳಿಂದ ನಮಗೆ ಅದು ಕರಡಿಯೆಂದು ಗೊತ್ತಾಗಿದ್ದುದು. ಮನೆಯಲ್ಲೊಂದು ನಾಯಿಯಿತ್ತು. 'ರಾಜ' ಎಂದು ಅದರ ಹೆಸರು. ಅವನೊಂಥರ ಮನೆಗೆ ಹಿರಿಯ, ಮಾರ್ಗದರ್ಶಿ. ಬೀದಿ ನಾಯಿಗಳ ತಂಟೆಗೆ ಹೋಗದ, ಹೇಲು ಮೂಸದ, ಮನೆ ಕಾಯುವ ಇಲ್ಲವೇ ಹೊಲ ಕಾಯುವ, ಇಲ್ಲವೇ ಮನೆ ಮಂದಿಗೆ ಜೊತೆಯಾಗುವ, ಊರಿಗೇ ಮರ್ಯಾದಸ್ಥನೆಂದು ಹೆಸರುವಾಸಿಯಾಗಿದ್ದ ಕಪ್ಪು ನಾಯಿ ರಾಜ. ಹಗಲಾಗಲೀ ಇರುಳಾಗಲೀ ರಾಜ ನಮಗೆ ನಿರಂತರ ಸಂಗಾತಿಯಾಗಿರುತ್ತಿದ್ದನು. ಓಟವೂ ಅಲ್ಲದ ನಡಿಗೆಯೂ ಅಲ್ಲದ ಒಂದು ಗತ್ತಿನ ಲಯದಲ್ಲಿ ಚಲಿಸುತ್ತಿದ್ದನು. ರಾತ್ರಿ ಭರ್ತಿ ಮುದ್ದೆ ಹೊಡೆದು ಮಜ್ಜಿಗೆ ಕುಡಿದು ಹೆಗಲ ಮೇಲೆ ಕಂಬಳಿ, ಒಂದು ಕೈನಲ್ಲಿ ಬೆತ್ತ ಇನ್ನೊಂದು ಕೈನಲ್ಲಿ 'ಬ್ಯಾಟರಿ' ಹಿಡಿದು ಹೊರಟರೆ, ದಟ್ಟ ಕತ್ತಲಲ್ಲಿ ರಾಜ ಮುಂದೆ, ನಾನು ನಡುವೆ, ಮಾಮ ಹಿಂದೆ. ನಮ್ಮ ಪ್ರಯಾಣವು ಮಂಚಿಕೆ ಕಡೆಗೆ. ಕಡಲೆ ಬಳ್ಳಿಗಳಿಗೆ ಗುಣಿಯಿಡುವ ಹಂದಿ ಕಾಯಲು, ತೆಂಗಿನಕಾಯಿ ಕಳ್ಳರನ್ನು ಕಾಯಲು. 'ಸೆಲ್ಲು ಡೌನಾಗುತ್ತದೆಂದು' ಅಮವಾಸ್ಯೆಯಲ್ಲೂ ಬ್ಯಾಟರಿ ಹೊತ್ತಿಸುತ್ತಿರಲಿಲ್ಲ



ಪುಣ್ಯಾತ್ಮ ಮಾಮ. ಅವರಿಗೆ ಲೆಕ್ಕ ಬರದಿದ್ದರೂ ಯಾವ ಗೊನೆಯಲ್ಲಿ ಎಷ್ಟು ಕಾಯಿ ಕಾಣೆಯಾಗಿದೆ ಎಂದು ಗೊತ್ತಾಗುತ್ತಿತ್ತು, ಬಹುಶಃ ಚಿತ್ರಸ್ಮರಣಾ ಶಕ್ತಿ ಇತ್ತೆನಿಸುತ್ತದೆ. 'ಒಂದೆರಡು ಕಾಯಿ ಹೋದರೂ ಚಿಂತೆಯಿಲ್ಲ, ಅಮವಾಸ್ಯೆ ಇರುಳಲ್ಲಿ ಹೋಗಬೇಡವೋ' ಎಂದು ಅಜ್ಜಿ ತಾತ ಗೋಗರೆದರೂ ಕೇಳದೆ ಹೊರಟುಬಿಡುತ್ತಿದ್ದರು. ಅಂತಹ ದಿವಸ ನಮಗೂ ಹೊರಹೋಗುವ ಅವಕಾಶವಿರುತ್ತಿರಲಿಲ್ಲ. ಕೆಲವೊಮ್ಮೆ ರಾಜನೂ ಬೇಸತ್ತು ಮನೆಗೆ ಬಂದು ಹಿಟ್ಟುಂಡು ಅಂಗಳದಲ್ಲಿ ಗೋಣಿಚೀಲದ ಮೇಲೆ ಮುದುರಿಬಿಡುತ್ತಿದ್ದ. ಆಗೆಲ್ಲ ಮಾಮ ಒಬ್ಬರೇ ಇರುತ್ತಿದ್ದರು. ಅವರಿಗೆ ಅಮಾವಾಸ್ಯೆ ಹುಣ್ಣಿಮೆಗಳ ನಡುವೆ ಬೆಳಕೊಂದು ಬಿಟ್ಟು ಇನ್ನಾವ ಅಂತರ ಕಾಣಿಸುತ್ತಿರಲಿಲ್ಲ.

ನಮ್ಮೂರಿನ ಶಾಲೆಗೂ ಅಲ್ಲಿನ ಶಿಕ್ಷಕರಿಗೂ ನಮ್ಮ ಮನೆಗೂ ಒಂದು ಬಗೆಯ ಅನ್ಯೋನ್ಯ ಸಂಬಂಧ ಇತ್ತು. ತಾತ ಶಾಲೆ ಕಟ್ಟಲು ಜಮೀನು ದಾನ ಮಾಡಿದ್ದರು. ಶಾಲೆಯ ಮುಖ್ಯ ದಿನಾಚರಣೆಗಳಿಗೆ ಗಣ್ಯ ಅತಿಥಿಯಾಗಿರುತ್ತಿದ್ದರು. ಅಲ್ಲಿನ ಒಬ್ಬ ಶಿಕ್ಷಕಿಗೆ ಮಜ್ಜಿಗೆಯೆಂದರೆ ಪ್ರಾಣ. ಘಮಘಮ ಸಾರೆಂದರೆ ಬಲು ಇಷ್ಟ. ಅದು ನಮ್ಮ ಮನೆಯಿಂದ ನಿತ್ಯವೂ ಸರಬರಾಜಾಗುತ್ತಿತ್ತು. ಅವರು ವರ್ಗಾವಣೆಯಾದ ಬಳಿಕ ಇನ್ನೊಬ್ಬ ಶಿಕ್ಷಕಿ ಬಂದರು. ಅವರಿಗೆ ಹೂಗಳೆಂದರೆ ಪ್ರಾಣ. ನಮ್ಮ ಮನೆಯ ಕಾಂಪೋಂಡಿನಲ್ಲಿ ದುಂಡುಮಲ್ಲಿಗೆ, ದಾಸವಾಳ ಇತ್ಯಾದಿ ಹೂಗಳಿದ್ದವು. ಅಕ್ಕ ಅವನ್ನು ಕಿತ್ತು ಯಾರಿಂದಲಾದರೂ ಟೀಚರಿಗೆ ತಲುಪಿಸುತ್ತಿದ್ದರು. ಒಮ್ಮೆ ಮಾಮನ ಕೈಲಿ ಕಳಿಸಿದ್ದರು. ಆಗ ನಾನು ತರಗತಿಯ ಮಣೆಯ ಮೇಲೆ ಕೂತಿದ್ದೆ. ಟೀಚರು ಟೇಬಲ್ಲಿನ ಮೇಲೆ ಕೂತಿದ್ದರು, ಮಾಮ ಬಡಬಡನೆ (ಅವರದು ದೊಡ್ಡ ಕಾಲು) ಬಂದರು, ದಾಸವಾಳವನ್ನು ಟೇಬಲ್ಲಿನ ಮೇಲಿಟ್ಟರು, ತಿರುಗಿ ಹಾಗೇ ಬಡಬಡನೆ ಹೋಗಿಬಿಟ್ಟರು. ಅಷ್ಟೂ ಸಮಯ ಅವರ ಕಣ್ಣು ನೆಲ ನೋಡುತ್ತಿತ್ತು. ಒಂದು ಕೈ ತಲೆ ಕೆರೆದುಕೊಳ್ಳುತ್ತಿತ್ತು. ಟೀಚರು ಮಾಮ ಬಂದ ವೇಗಕ್ಕೆ ಮೊದಲು ಗಾಬರಿ ಬಿದ್ದು ಹೂ ಇಸಕೊಂಡು ತಲೆಗೆ ಮುಡಿಯುತ್ತ ಥ್ಯಾಂಕ್ಸ್ ಹೇಳಲು ತಲೆಯೆತ್ತಿದರೆ ವ್ಯಕ್ತಿ ಮಾಯ! ಮನುಷ್ಯ ಸಹಜವಾದ ನಾಚಿಕೆ ಸಂಕೋಚಗಳೆಲ್ಲ ಮಾಮನಿಗೂ ಇತ್ತೆನಲು ನನಗಿರುವ ಸಾಕ್ಷ್ಯಿಯಿದು.

ಕಾಲಾನಂತರ ಅವರಿಗೆ ಕೊನೆಗೂ ಒಂದು ಗಂಡು ಮಗು ಹುಟ್ಟಿತು. ಅದು ಮನೆಮಂದಿ ಬಂಧುಬಳಗಕ್ಕೆಲ್ಲ ಅತೀವ ಸಂತಸದ ಗಳಿಗೆ. ಕೊನೆಗೂ ದೇವರು ಕಣ್ಣುಬಿಟ್ಟ ಎನ್ನುತ್ತಿದ್ದರು ಎಲ್ಲರೂ. ಆ ಹೊತ್ತಿಗೆ ನಾನಾಗಲೇ ದೂರದ ವಸತಿ ಶಾಲೆ ಸೇರಿದ್ದೆ. ನನ್ನ ಅಮ್ಮ ಆ ಸಂಭ್ರಮವನ್ನು ಹಂಚಿಕೊಳ್ಳಲೆಂದೇನೆ ಸುದ್ದಿಯನ್ನು ಹೊತ್ತುಕೊಂಡು ನನ್ನ ಕಾಣಲು ಬಂದಿದ್ದರು. ತೊಟ್ಟಿಲ ಸಂಭ್ರಮದಲ್ಲಿ ನಾನು ಭಾಗಿಯಾಗಿದ್ದೆ. ಮಾಮನ ಸಂಭ್ರಮ ನನ್ನ ಸ್ಮೃತಿಯಲ್ಲಿ ಉಳಿದಿಲ್ಲ. ಬಹುಶಃ ಉಳಿದವರ ಸಂಭ್ರಮದ ನಡುವೆ ಅವರಿಗೆ ಅಲ್ಲಿ ಜಾಗವೇ ಇರಲಿಲ್ಲವೆನಿಸುತ್ತದೆ. ಅದೂ ಇದೂ ಸಾಮಾನು ಹೊಂದಿಸಿಕೊಡುವುದರಲ್ಲಿ